# KAS-ಪೂರ್ವಭಾವಿ ಪರೀಕ್ಷೆ -1998
# ಸಾಮಾನ್ಯ ಅಧ್ಯಯನ

1) ಕೆಳಗಿನ I ಮತ್ತು II ಪಟ್ಟಿಗಳನ್ನು ಹೋಲಿಸಿ ಸರಿ ಹೊಂದಾಣಿಕೆಯನ್ನು ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಆಯ್ಕೆಮಾಡಿ.

| ಪಟ್ಟಿ I | ಪಟ್ಟಿ II |
|---|---|
| (A) ಮುದ್ರಾರಾಕ್ಷಸ | 1. ಹರ್ಷವರ್ಧನ |
| (B) ಸೂರ್ಯಸಿದ್ಧಾಂತ | 2. ವಸುಮಿತ್ರ |
| (C) ನಾಗಾನಂದ | 3. ಆರ್ಯಭಟ |
| (D) ಬುದ್ಧ ಚರಿತ | 4. ಅಶ್ವಘೋಷ |
| | 5. ವಿಶಾಖದತ್ತ |

ಸಂಕೇತ

| | A | B | C | D |
|---|---|---|---|---|
| (a) | 5 | 3 | 1 | 4 |
| (b) | 5 | 1 | 2 | 3 |
| (c) | 1 | 3 | 4 | 5 |
| (d) | 1 | 2 | 4 | 3 |

2) ದಕ್ಷಿಣ ಭಾರತದ ಮೊದಲ ಸ್ವತಂತ್ರ ರಾಜವಂಶ

(A) ಚೋಳರು (B) ಚೇರರು

(C) ಪಾಂಡ್ಯರು (D) ಶಾತವಾಹನರು

3) ಕನ್ನಡದಲ್ಲಿ ಉಪಲಬ್ಧವಿರುವ ಮೊದಲ ಸಾಹಿತ್ಯ ಕೃತಿ

(A) ಶಬ್ದಮಣಿದರ್ಪಣ

(B) ಕವಿರಾಜಮಾರ್ಗ

(C) ವಡ್ಡಾರಾಧನೆ

(D) ಆದಿಪುರಾಣ

4) ತಲಕಾಡಿನ ಗಂಗರ ರಾಜ ಲಾಂಛನ

(A) ಗಜ (B) ಸಿಂಹ

(C) ವರಾಹ (D) ನಂದಿ

5) ಎಲ್ಲೋರದ ಏಕಶಿಲಾ ಕೈಲಾಸ ದೇವಾಲಯ ಈತನ ಆಳ್ವಿಕೆಯಲ್ಲಿ ಕೆತ್ತಲ್ಪಟ್ಟಿತು

(A) ಅಮೋಘವರ್ಷ ನೃಪತುಂಗ

(B) ಮಂಗಳೇಶ

(C) ಮೊದಲನೆಯ ಕೃಷ್ಣ

(D) ಇಮ್ಮಡಿ ಪುಲಿಕೇಶಿ

6) ಕೆಳಗಿನ I ಮತ್ತು II ಪಟ್ಟಿಗಳನ್ನು ಹೋಲಿಸಿ ಸರಿ ಹೊಂದಾಣಿಕೆಯ ಸಂಕೇತವನ್ನು ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಆಯ್ಕೆಮಾಡಿ.

ಪಟ್ಟಿ I

(A) ಅರಬರ ಸಿಂಧ್ ದಾಳಿ

(B) ಸೋಮನಾಥದ ಲೂಟಿ

(C) ಎರಡನೆಯ ತರೈನ್ ಕದನ

(D) ದೆಹಲಿಯ ಸುಲ್ತಾನಾಧಿಪತ್ಯದ ಸ್ಥಾಪನೆ

ಪಟ್ಟಿ II

1. 1191
2. 1206
3. 1025
4. 1026
5. 1192

ಸಂಕೇತ

| | A | B | C | D |
|---|---|---|---|---|
| (a) | 3 | 5 | 4 | 2 |
| (b) | 3 | 4 | 5 | 2 |
| (c) | 1 | 2 | 4 | 3 |
| (d) | 1 | 3 | 5 | 4 |

7) ಚಹಲ್‌ಗನಿಯನ್ನು ನಾಶಮಾಡಿದ ದೆಹಲಿಯ ಸುಲ್ತಾನ

(A) ಇಲ್ತಮಿಷ್

(B) ಅಲ್ಲಾವುದ್ದೀನ್ ಖಿಲ್ಜಿ

(C) ಕುತ್ಬುದ್ದೀನ್ ಐಬಕ್

(D) ಬಲ್ಬನ್

8) 'ದಾಮ್ ' ಎಂಬ ಹೊಸ ನಾಣ್ಯವನ್ನು ಚಲಾವಣೆಗೆ ತಂದವನು

(A) ಅಲ್ಲಾವುದ್ದೀನ್ ಖಿಲ್ಜಿ

(B) ಮೊಹಮದ್ ಬಿನ್ ತುಘಲಕ್

(C) ಬಾಬರ್

(D) ಷೇರ್‌ಷಹ

9) ಕೆಳಗಿನವುಗಳಲ್ಲಿ ಸರಿಯಾದ ಹೊಂದಾಣಿಕೆ ಇಲ್ಲದ್ದು ಯಾವುದು?

(A) ಅಕ್ಬರ್ – ಬುಲಂದ್ ದರ್ವಾಜಾ

(B) ಜಹಾಂಗೀರ್ – ಜಹಾಂಗೀರ್ ಮಹಲ್

(C) ಷಾಹಜಹಾನ್ – ರೆಡ್ ಫೋರ್ಟ್

(D) ಔರಂಗಜೇಬ್ – ಬಾದಶಾಹಿ ಮಸೀದಿ

10) ಶಿವಾಜಿಯ ಪಟ್ಟಾಭಿಷೇಕ ನಡೆದ ಸ್ಥಳ

(A) ತೋರಣಗಢ (B) ಪ್ರತಾಪಗಢ

(C) ರಾಯಗಢ (D) ಸಿಂಹಗಢ

11) ಪಂಚಪ್ರಧಾನರೆಂಬ ಮಂತ್ರಿಮಂಡಲ ಇವರ ಆಳ್ವಿಕೆಯಲ್ಲಿತ್ತು

(A) ದ್ವಾರಸಮುದ್ರದ ಹೊಯ್ಸಳರು

(B) ಮಾನ್ಯಖೇಟದ ರಾಷ್ಟ್ರಕೂಟರು

(C) ವಿಜಯನಗರದ ರಾಯರು

(D) ಮೈಸೂರಿನ ಒಡೆಯರು

12) 'ಯವನರಾಜ್ಯ ಸ್ಥಾಪನಾಚಾರ್ಯ' ಎಂಬ ಬಿರುದನ್ನು ಹೊಂದಿದ್ದ ವಿಜಯನಗರದ ದೊರೆ

(A) ಮೊದಲನೆಯ ಬುಕ್ಕರಾಯ

(B) ಎರಡನೆಯ ದೇವರಾಯ

(C) ಕೃಷ್ಣದೇವರಾಯ

(D) ಮೊದಲನೆಯ ವೆಂಕಟ

13) ಬಸವೇಶ್ವರರು ಪ್ರತಿಪಾದಿಸಿದ ಸಿದ್ಧಾಂತ (ದರ್ಶನ)

(A) ಅದ್ವೈತ (B) ದ್ವೈತ

(C) ವಿಶಿಷ್ಟಾದ್ವೈತ (D) ಶಕ್ತಿವಿಶಿಷ್ಟಾದ್ವೈತ

14) ಕೆಳಗಿನ ಜೋಡಿಗಳಲ್ಲಿ ಸರಿಯಾಗಿ ಹೊಂದಾಣಿಕೆ ಇರುವುದು ಯಾವುದು?

(A) ಮೊದಲನೆಯ ಆಂಗ್ಲೋ -ಮೈಸೂರು ಯುದ್ಧ - ವಾರನ್ ಹೇಸ್ಟಿಂಗ್ಸ್

(B) ಮೂರನೆಯ ಆಂಗ್ಲೋ -ಮೈಸೂರು ಯುದ್ಧ - ವೆಲ್ಲೆಸ್ಲಿ

(C) ಮೊದಲನೆಯ ಆಂಗ್ಲೋ -ಸಿಖ್ ಯುದ್ಧ - ಡಾಲ್‌ಹೌಸಿ

(D) ಮೂರನೆಯ ಆಂಗ್ಲೋ-ಆಫ್‌ಘನ್ ಯುದ್ಧ - ಹಾರ್ಡಿಂಗ್

15) ಭಾರತೀಯ ಸಿವಿಲ್ ಸೇವೆಯನ್ನು ಪ್ರಾರಂಭಿಸಿದವರು

(A) ವಾರನ್ ಹೇಸ್ಟಿಂಗ್ಸ್ (B) ವಿಲಿಯಂ ಬೆಂಟಿಂಕ್

(C) ಕಾರ್ನ್‌ವಾಲಿಸ್ (D) ಡಾಲ್‌ಹೌಸಿ

16) '1857ರ ದಂಗೆ' ಈ ಸ್ಥಳಗಳಲ್ಲಿ ಕೆಳಗೆ ಸೂಚಿಸಿರುವ ನಾಯಕರುಗಳ ಮುಂದಾಳತ್ವದಲ್ಲಿ ನಡೆಯಿತು. ಕೆಳಗಿನ I ಮತ್ತು II ಪಟ್ಟಿಗಳನ್ನು ಹೋಲಿಸಿ ಸರಿಹೊಂದಾಣಿಕೆಯನ್ನು ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಆಯ್ಕೆಮಾಡಿ.

ಪಟ್ಟಿ I

(A) ಬಂಗಾಳ

(B) ಉತ್ತರ ಪ್ರದೇಶ

(C) ಬಿಹಾರ

(D) ರೋಹಿಲ್‌ಖಂಡ್

ಪಟ್ಟಿ II

1. ಮೌಲ್ವಿ ಅಹಮದುಲ್ಲಾ
2. ಕುಮಾರ್ ಸಿಂಗ್
3. ಮಂಗಳ ಪಾಂಡೆ
4. ನಾನಾಸಾಹಿಬ್
5. ರಾಣಿ ಲಕ್ಷ್ಮಿಬಾಯಿ

ಸಂಕೇತ

| | A | B | C | D |
|---|---|---|---|---|
| (a) | 3 | 1 | 2 | 5 |
| (b) | 3 | 4 | 2 | 1 |
| (c) | 1 | 2 | 3 | 4 |
| (d) | 1 | 4 | 2 | 5 |

17) ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪನೆಯ ಕಾಲದಲ್ಲಿ ಭಾರತದ ವೈಸರಾಯ್

(A) ರಿಪ್ಪನ್ (B) ಕರ್ಜನ್

(C) ಲಾನ್ಸ್‌ಡೌನ್ (D) ಡಫರಿನ್

18) ಭಾರತಕ್ಕೆ ಒಕ್ಕೂಟ ಸರ್ಕಾರವನ್ನು ಶಿಫಾರಸ್ಸು ಮಾಡಿದ ಕಾಯಿದೆ

(A) 1909 ರ ಕಾಯಿದೆ

(B) 1947 ರ ಭಾರತ ಸ್ವಾತಂತ್ರ್ಯ ಕಾಯಿದೆ

(C) 1935 ರ ಕಾಯಿದೆ

(D) 1919 ರ ಕಾಯಿದೆ

19) ನವರಾತ್ರಿ ಹಬ್ಬದ ಆಚರಣೆಯನ್ನು ಪ್ರಾರಂಭಿಸಿದ ಮೈಸೂರಿನ ಅರಸ

(A) ರಾಜ ಒಡೆಯರ್

(B) ಕಂಠೀರವ ನರಸರಾಜ ಒಡೆಯರ್

(C) ಚಿಕ್ಕದೇವರಾಜ ಒಡೆಯರ್

(D) ದೊಡ್ಡದೇವರಾಜ ಒಡೆಯರ್

20) ಕೃಷ್ಣರಾಜಸಾಗರದಲ್ಲಿ ಬೃಂದಾವನ ಉದ್ಯಾನಗಳ ನಿರ್ಮಾಣಕ್ಕೆ ಕಾರಣರಾದ ಮೈಸೂರಿನ ದಿವಾನರು

(A) ಎಂ. ವಿಶ್ವೇಶ್ವರಯ್ಯ

(B) ಕಾಂತರಾಜೇ ಅರಸ್

(C) ಆಲ್ಬಿಯನ್ ಬ್ಯಾನರ್ಜಿ

(D) ಮಿರ್ಜಾ ಇಸ್ಮಾಯಿಲ್

21) ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆಯಾದ ವರ್ಷ

(A) 1912 (B) 1914 (C) 1916 (D) 1918

22) ನವ ಮೈಸೂರು ರಾಜ್ಯದ ಮೊದಲ ಮುಖ್ಯಮಂತ್ರಿ
(A) ಕೆ.ಸಿ. ರೆಡ್ಡಿ
(B) ಕೆಂಗಲ್ ಹನುಮಂತಯ್ಯ
(C) ಕಡಿದಾಳ್ ಮಂಜಪ್ಪ
(D) ಎಸ್. ನಿಜಲಿಂಗಪ್ಪ

23) ಬ್ರಿಟಿಷ್ ದ್ವೀಪಗಳು ಈ ವರ್ಗಕ್ಕೆ ಸೇರಿವೆ
(A) ಹವಳ ದ್ವೀಪಗಳು
(B) ಖಂಡಾಂತರ ದ್ವೀಪಗಳು
(C) ಸಾಗರದ ದ್ವೀಪಗಳು
(D) ವಿವರ್ತನಿಕ (ಟೆಕ್ಟಾನಿಕ್) ದ್ವೀಪಗಳು

24) ಕೆಳಗಿನ ಜೋಡಿಗಳಲ್ಲಿ ಸರಿಯಾದ ಹೊಂದಾಣಿಕೆ ಇಲ್ಲದಿರುವುದು ಯಾವುದು ?
(A) ಸಮಭಾಜಕ ವೃತ್ತ ಪ್ರದೇಶ – ಇಡೀ ವರ್ಷ ಮಳೆ
(B) ಸವನ್ನಾ ಪ್ರದೇಶ – ಬೇಸಿಗೆಯಲ್ಲಿ ಮಳೆ
(C) ಮೆಡಿಟರೇನಿಯನ್ ಪ್ರದೇಶ – ಬೇಸಿಗೆಯಲ್ಲಿ ಅನಾವೃಷ್ಟಿ
(D) ಧ್ರುವ ಪ್ರದೇಶ – ಚಳಿಗಾಲದಲ್ಲಿ ಮಳೆ

25) ಸೂಯಜ್ ಕಾಲುವೆ ಇವುಗಳನ್ನು ಸೇರಿಸುತ್ತದೆ
(A) ಪೆಸಿಫಿಕ್ ಮತ್ತು ಅಟ್ಲಾಂಟಿಕ್ ಸಾಗರಗಳು
(B) ಅಟ್ಲಾಂಟಿಕ್ ಮತ್ತು ಹಿಂದೂ ಮಹಾಸಾಗರಗಳು
(C) ಪರ್ಷಿಯನ್ ಕೊಲ್ಲಿ ಮತ್ತು ಅರಬ್ಬಿ ಸಮುದ್ರ
(D) ಮೆಡಿಟರೇನಿಯನ್ ಮತ್ತು ಕೆಂಪು ಸಮುದ್ರಗಳು

26) ಕೆಳಗಿನ I ಮತ್ತು II ಪಟ್ಟಿಗಳನ್ನು ಹೋಲಿಸಿ ಸರಿ ಹೊಂದಾಣಿಕೆಯನ್ನು ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಆಯ್ಕೆಮಾಡಿ.

| ಪಟ್ಟಿ I | ಪಟ್ಟಿ II |
|---|---|
| (ದೇಶ) | (ರಾಜಧಾನಿ) |
| (A) ಆರ್ಮೀನಿಯಾ | 1. ಜಾಗ್ರೆಬ್ |
| (B) ಬೆಲ್ಜಿಯಂ | 2. ರಾಬಾತ್ |
| (C) ಕ್ರೊಯೇಷಿಯಾ | 3. ಬ್ರಸೆಲ್ಸ್ |
| (D) ಮೊರೊಕೊ | 4. ಯಾರೆನ್ |
| | 5. ಯೆರೆವನ್ |

ಸಂಕೇತ

| | A | B | C | D |
|---|---|---|---|---|
| (a) | 1 | 2 | 3 | 4 |
| (b) | 1 | 3 | 4 | 5 |
| (c) | 5 | 3 | 1 | 2 |
| (d) | 5 | 4 | 2 | 3 |

27) ಪ್ರಪಂಚದಲ್ಲಿ ಅತಿ ಚಿಕ್ಕ ದೇಶ/ಸಂಸ್ಥಾನ
(A) ಮೊನಾಕೊ (B) ವ್ಯಾಟಿಕನ್ ಸಿಟಿ
(C) ಶ್ರೀಲಂಕಾ (D) ಬಂಗ್ಲಾದೇಶ

28) ಮ್ಯಾನ್‌ಮಾರ್ ಈ ದೇಶದ ಈಗಿನ ಹೆಸರು
(A) ಬರ್ಮಾ (B) ಕಾಂಬೋಡಿಯಾ
(C) ಫಾರ್ಮೋಸಾ (D) ಝಯಿರ್

29) ಕೆಳಗಿನವುಗಳಲ್ಲಿ ಯಾವುದನ್ನು ಅಂತರ ರಾಷ್ಟ್ರೀಯ ಸಾಗರ ವರ್ಷ (''ಇಂಟರ್‌ನ್ಯಾಷನಲ್ ಇಯರ್ ಆಫ್ ದಿ ಓಷನ್'')ಎಂದು ಘೋಷಿಸಲಾಗಿದೆ?
(A) 1994 (B) 1996
(C) 1997 (D) 1998

30) ಭೂಮಿಯ ಮೇಲೆ ಅತಿ ಹೆಚ್ಚು ತಾಪಮಾನ (ಉಷ್ಣತೆ) ಇರುವ ಭೂಭಾಗವನ್ನು ಈ ರೀತಿ ಕರೆಯಲಾಗಿದೆ
(A) ಡೋಲ್ಡ್ರಮ್ಸ್ (B) ಟಾರಿಡ್ ಜೋನ್
(C) ಟ್ರಾಪಿಕಲ್ ಬೆಲ್ಟ್
(D) ಥರ್ಮಲ್ ಇಕ್ವೇಟರ್

31) ಕೆಳಗಿನ ರಾಜ್ಯಗಳಲ್ಲಿ ಅತ್ಯಧಿಕ ಜನನ ಪ್ರಮಾಣವನ್ನು ಹೊಂದಿರುವುದು ಯಾವುದು ?
(A) ಅರುಣಾಚಲ ಪ್ರದೇಶ (B) ಬಿಹಾರ
(C) ಉತ್ತರ ಪ್ರದೇಶ (D) ಮಧ್ಯ ಪ್ರದೇಶ

32) ಕೆಳಗಿನ I ಮತ್ತು II ಪಟ್ಟಿಗಳನ್ನು ಹೋಲಿಸಿ ಸರಿ ಹೊಂದಾಣಿಕೆಯನ್ನು ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಆಯ್ಕೆಮಾಡಿ.

| ಪಟ್ಟಿ I | ಪಟ್ಟಿ II |
|---|---|
| (A) ಬೊಕಾರೊ | 1. ಅಲ್ಯುಮಿನಿಯಂ |
| (B) ಕೊರ್ಬಾ | 2. ತಾಮ್ರ |
| (C) ತುಮ್‌ಸಾರ್ | 3. ಮ್ಯಾಂಗನೀಸ್ |
| (D) ಘಟ್ಸಿಲಾ | 4. ಉಕ್ಕು |

ಸಂಕೇತ

| | A | B | C | D |
|---|---|---|---|---|
| (a) | 1 | 2 | 3 | 4 |
| (b) | 4 | 3 | 2 | 1 |
| (c) | 4 | 1 | 3 | 2 |
| (d) | 4 | 2 | 3 | 1 |

33) 1991 ರ ಜನಗಣತಿಯ ಪ್ರಕಾರ, ನಗರಪ್ರದೇಶದಲ್ಲಿ ವಾಸಿಸುತ್ತಿರುವ ಕರ್ನಾಟಕದ ಜನಸಂಖ್ಯೆಯ ಶೇಕಡಾವಾರು ಪ್ರಮಾಣ

(A) 25 (B) 30 (C) 35 (D) 40

34) ಒಟ್ಟು ವಿಸ್ತೀರ್ಣದ ಶೇಕಡಾ 50ಕ್ಕಿಂತ ಹೆಚ್ಚು ಭಾಗ ಅರಣ್ಯ ಪ್ರದೇಶವನ್ನು ಹೊಂದಿವೆ ಎಂದು ವರದಿಯಾಗಿರುವ ಈಶಾನ್ಯ ಭಾರತದ ನಾಲ್ಕು ರಾಜ್ಯಗಳು

(A) ಅರುಣಾಚಲ ಪ್ರದೇಶ, ಮೇಘಾಲಯ, ಮಣಿಪುರ ಮತ್ತು ತ್ರಿಪುರ

(B) ಮೇಘಾಲಯ, ಮಣಿಪುರ, ತ್ರಿಪುರ ಮತ್ತು ನಾಗಾಲ್ಯಾಂಡ್

(C) ಮೇಘಾಲಯ, ಮಿಜೋರಾಂ,ತ್ರಿಪುರ ಮತ್ತು ನಾಗಾಲ್ಯಾಂಡ್


(D) ಅಸ್ಸಾಂ, ಮೇಘಾಲಯ, ಮಿಜೋರಾಂ ಮತ್ತು ಅರುಣಾಚಲ ಪ್ರದೇಶ

35) ಕೆಳಗಿನ ಭಾರತದ ಪ್ರಮುಖ ನದಿಗಳಲ್ಲಿ ಪಶ್ಚಿಮ ಘಟ್ಟಗಳಲ್ಲಿ ಉಗಮವಾಗದ ನದಿ ಯಾವುದು ?

(A) ಕಾವೇರಿ (B) ಕೃಷ್ಣಾ

(C) ಮಹಾನದಿ (D) ಗೋದಾವರಿ

36) ಕೆಳಗೆ ಕೊಟ್ಟರುವ ಭೂಪಟ (ನಕ್ಷೆ) ವನ್ನು ಪರಿಗಣಿಸಿ.




A, B, C ಮತ್ತು D ಎಂದು ಭೂಪಟಗಳಲ್ಲಿ ಗುರುತಿಸಿರುವ ಪ್ರದೇಶಗಳು ಕ್ರಮವಾಗಿ ಈ ಬೆಳೆಗಳ ಕೃಷಿಗೆ ಪ್ರಸಿದ್ಧವಾಗಿವೆ

(A) ಕಡಲೆಕಾಯಿ, ಗೋಣೆನಾರು, ಹೊಗೆಸೊಪ್ಪು ಮತ್ತು ಕಬ್ಬು

(B) ಕಡಲೆಕಾಯಿ, ಕಬ್ಬು, ಗೋಣೆನಾರು ಮತ್ತು ಹೊಗೆಸೊಪ್ಪು

(C) ಗೋಣೆನಾರು, ಕಬ್ಬು, ಕಡಲೆಕಾಯಿ ಮತ್ತು ಹೊಗೆಸೊಪ್ಪು

(D) ಗೋಣೆನಾರು, ಕಡಲೆಕಾಯಿ,ಕಬ್ಬು ಮತ್ತು ಹೊಗೆಸೊಪ್ಪು

37) ಭಾರತದಲ್ಲಿ ಅತ್ಯಂತ ವಿಶಾಲವಾದ ಹುಲಿ ಅಭಯಾರಣ್ಯವನ್ನು ಹೊಂದಿರುವ ರಾಜ್ಯ

(A) ಕರ್ನಾಟಕ (B) ಪಶ್ಚಿಮ ಬಂಗಾಳ

(C) ಆಂಧ್ರ ಪ್ರದೇಶ (D) ಗುಜರಾತ್

38) ಕೆಳಗಿನವುಗಳಲ್ಲಿ ಸರಿಯಾದ ಹೊಂದಾಣಿಕೆ ಇಲ್ಲದ್ದು ಯಾವುದು?

(A) ಅಸ್ಸಾಂ - ದಿಬ್ರುಘಡ್

(B) ಮಿಜೋರಮ್ - ಐಜ್ವಾಲ್

(C) ನಾಗಾಲ್ಯಾಂಡ್ - ಕೊಹಿಮಾ

(D) ಅರುಣಾಚಲ ಪ್ರದೇಶ - ಇಟಾನಗರ

39) ವಿಸ್ತೀರ್ಣದಲ್ಲಿ ಅತಿ ಚಿಕ್ಕದಾದ ಕೇಂದ್ರಾಡಳಿತ ಪ್ರದೇಶ

(A) ದಾದ್ರಾ ಮತ್ತು ನಾಗರ್‌ಹವೇಲಿ

(B) ಡಾಮನ್ ಮತ್ತು ಡಿಯು

(C) ಪುದುಚೇರಿ

(D) ಲಕ್ಷದ್ವೀಪ

40) ಕೆಳಗೆ ಎರಡು ಹೇಳಿಕೆಗಳನ್ನು ಕೊಟ್ಟಿದ್ದು, ಒಂದನ್ನು ಪ್ರತಿಪಾದನೆ (A) ಎಂದೂ, ಮತ್ತೊಂದನ್ನು ಕಾರಣ (R) ಎಂದೂ ಹೆಸರಿಸಲಾಗಿದೆ

ಪ್ರತಿಪಾದನೆ (A) : ಹಿಮಾಲಯದ ನದಿಗಳು ಸದಾಕಾಲ ತುಂಬಿ ಹರಿಯುತ್ತವೆ.

ಕಾರಣ (**R**) : ಆ ಪ್ರದೇಶ ನೈರುತ್ಯ ಮುಂಗಾರಿ ನಿಂದ ಮಳೆಯನ್ನು ಪಡೆಯುತ್ತದೆ.

ಮೇಲಿನ ಎರಡು ಹೇಳಿಕೆಗಳಿಗೆ ಸಂಬಂಧಿಸಿದಂತೆ ಕೆಳಗಿನವುಗಳಲ್ಲಿ ಯಾವುದು ಸರಿಯಾಗಿದೆ ?

(A) **A** ಮತ್ತು **R** ಗಳೆರಡೂ ಸರಿ ಮತ್ತು **R, A** ಯ ಸರಿಯಾದ ವಿವರಣೆಯಾಗಿದೆ

(B) **A** ಮತ್ತು **R** ಗಳೆರಡೂ ಸರಿ, ಆದರೆ **R, A** ಯ ಸರಿಯಾದ ವಿವರಣೆಯಲ್ಲ

(C) **A** ಸರಿ, ಆದರೆ **R** ತಪ್ಪು

(D) **A** ತಪ್ಪು, ಆದರೆ **R** ಸರಿ.

41) ಉಷ್ಣವಲಯದ ಚಂಡಮಾರುತಗಳಿಂದ ಮತ್ತೆ ಮತ್ತೆ ನಷ್ಟಕ್ಕೊಳಗಾಗುತ್ತಿರುವ ಪ್ರದೇಶ

(A) ಗುಜರಾತ್ ತೀರ ಪ್ರದೇಶ

(B) ಕೊಂಕಣ ತೀರ ಪ್ರದೇಶ

(C) ಕೋರಮಂಡಲ ತೀರ ಪ್ರದೇಶ

(D) ಮಲಬಾರ್ ತೀರ ಪ್ರದೇಶ

42) ಕೆಳಗಿನ ನಗರಗಳಲ್ಲಿ ಯಾವುದನ್ನು ''ಭಾರತದ ಸಿಲಿಕಾನ್ ಕಣಿವೆ'' ಎಂದು ಕರೆಯಲಾಗಿದೆ ?

(A) ಬೆಂಗಳೂರು (B) ಚೆನ್ನೈ

(C) ಹೈದರಾಬಾದ್ (D) ಮುಂಬಯಿ

43) ಇವುಗಳನ್ನು ವಿಷುವ (ಈಕ್ವಿನಾಕ್ಸ್) ದಿನಗಳೆಂದು ಕರೆಯಲಾಗಿದೆ

(A) ಭಾರತದಲ್ಲಿ ಹಗಲು ಮತ್ತು ರಾತ್ರಿಗಳೆರಡೂ ಸಮ ಅವಧಿಯನ್ನು ಹೊಂದಿರುವ ದಿನಗಳು

(B) ಪ್ರಪಂಚದಾದ್ಯಂತ ಹಗಲು ಮತ್ತು ರಾತ್ರಿಗಳೆರಡೂ ಸಮ ಅವಧಿಯನ್ನು ಹೊಂದಿರುವ ದಿನಗಳು